MYSORE LEGISLATIVE ASSEMBLY

SIXTH DAY.

Saturday, the 26th February 1955.

The House met in the Assembly Hall, Old Public Offices, Bangalore, at Thirty-Minutes past Eight of the Clock.

MR. SPEAKER (SRI H. S. RUDRAPPA, B.SC., LL.B.) in the Chair.

QUESTIONS AND ANSWERS

Electric Power in Anekal Taluk (conversion to 50 cycles).

Q.—622. Sm. LAKSHMIDEVI RAMANNA (Hoskote-Anekal):—

Will the Government be pleased to state:—

(*a*) whether it has come to their notice that the raiyats that need electric power throughout Anekal Taluk for irrigation are put to inconvenience by non-supply of power owing to the existence of 25 cycle power station in that taluk ?

(*b*) whether steps will be taken to convert the above station into 50 cycles from this year alone ?

A.—Dr. R. NAGAN GOWDA (Minister for Agriculture).—

(*a*) It has not been possible in recent times to extend power supply to irrigation pumping sets in the area owing to the fully loaded condition of the present 25 cycle system.

(*b*) Steps have already been taken and it is expected that the conversion will be effected during the next official year.

ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ.—ಈಗಿರತಕ್ಕ 25 ಸೈಕಲ್ ಎದ್ಯುಚ್ಛಕ್ತಿ ಸ್ಟೇಷನ್ನಿಗೆ ಪರಮಾವಧಿ ಪ್ರಮಾಣದಷ್ಟು ಎದ್ಯುಚ್ಛಕ್ತಿ ಭರ್ತಿಯಾಗಿದೆಯೆಂದು ಉತ್ತರ ಹೇಳಿದ್ದೀರಿ. ಹೀಗೆ ಭರ್ತಿಯಾಗಿ ಎಷ್ಟು ವರ್ಷವಾಯಿತು !

*ಡಾ॥ ಆರ್. ನಾಗನಗೌಡ.—ಕೆಲವು ಕಾಲವಾಗಿದೆ, ಇಷ್ಟೇ ದಿವಸವಾಗಿದೆ ಎಂದು ಹೇಳುವುದಕ್ಕೆ ಕಷ್ಟವಾಗುತ್ತದೆ.

ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ.—ಈಗ ಎರಡು ಮೂರು ವರ್ಷಗಳಿಂದ ಅನೇಕರ್ ತಾಲ್ಲೂಕಿಗೆ ಹೊಸದಾಗಿ ವ್ಯವಸಾಯದ ಪಂಪುಗಳಿಗೆ ವಿದ್ಯುಚ್ಛಕ್ತಿ ಸರಬ್ರಾಜು ಮಾಡಿಲ್ಲ ಅಲ್ಲವೆ ?

ಡಾ॥ ಆರ್. ನಾಗನಗೌಡ.—ಮಾಡುವುದಕ್ಕೆ ಕಷ್ಟವಿದೆ.

ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ.—ಈಗಾಗಲೇ ಕಾರ್ಯಕ್ರಮ ಕೈಕೊಳ್ಳಲಾಗಿದೆ ಎಂದು ಹೇಳಿದ್ದೀರಿ, ಏನು ಕಾರ್ಯಕ್ರಮ ಕೈಕೊಂಡಿದ್ದೀರಿ ?

ಡಾ॥ ಆರ್. ನಾಗನಗೌಡ.—ಮೈಸೂರಿನಿಂದ ಬೆಂಗಳೂರಿಗೆ 50 ಸೈಕಲ್ ವಿದ್ಯುಚ್ಛಕ್ತಿಯನ್ನು ತರುವುದಕ್ಕೆ ಪ್ರಯತ್ನಮಾಡುತ್ತಿದ್ದೇವೆ; ಆಮೇಲೆ ಅಲ್ಲಿಂದ ಅನೇಕರ್ ಮತ್ತು ಹೊಸಕೋಟೆಗೂ ರ್ಯೆಹಾಕುವ ಯೋಚನೆಯೂ ಇದೆ.

ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ.—ಇದಕ್ಕೆ ಇನ್ನೆಷ್ಟು ವರ್ಷ ಹಿಡಿಯುತ್ತದೆ ?

ಡಾ॥ ಆರ್. ನಾಗನಗೌಡ.—ವರ್ಷವಿಲ್ಲ, ಕೆಲವೇ ತಿಂಗಳಲ್ಲಿ ಕೆಲಸವಾಗಬಹುದೆಂದು ನನ್ನ ಭಾವನೆ.

Co-operative Credit Banks Steps to (start one in Tumkur District).

Q.—223. Sri T. G. THIMMEGOWDA (Tiptur).—

Will the Government be pleased to state:—

(*a*) the number of Co-operative Credit Banks in the State;

(*b*) whether there has been representation received from Co-operative Institutions and raiyats in Tumkur District to grant one for their District;

(*c*) whether they take immediate steps to start one in Tumkur District ?

A.—Dr. R. NAGAN GOWDA (Minister for Agriculture).—

(*a*) Four inclusive of one in Bellary District.

(*b*) Yes.

(*c*) Yes. Action is being taken to establish District Central Banks in all the Districts.

ಶ್ರೀ ಟಿ. ಜಿ. ತಿಮ್ಮೇಗೌಡ.—ಷೇರು ಮೊಬಲಗು ಎಷ್ಟು ವಸೂಲಾಗಿದೆ ?

* Indicates that the remarks have not been revised by the Member concerned.

ಡಾ॥ ಆರ್. ನಾಗನಗೌಡ.—ಇಪ್ಪತ್ತು ಸಾವಿರಕ್ಕೆ ಮೇಲ್ಪಟ್ಟಾಗಿದೆ ಎಂದು ಕೇಳಿದ್ದೇನೆ. ಈ ಕಾರ್ಯವನ್ನು ಇನ್ನೂ ಪ್ರಾರಂಭಮಾಡಿದ್ದೇವೆ. ತಾವೆಲ್ಲ ಸಹಾಯಮಾಡಿದರೆ ಎರಡು ಲಕ್ಷ ರೂಪಾಯಿ ಬೇಗ ವಸೂಲಾಗುವ ನಿರೀಕ್ಷೆಯಿದೆ.

ಶ್ರೀ ಟಿ. ಜಿ. ತಿಮ್ಮೇಗೌಡ.—ಈ ಬ್ಯಾಂಕುಗಳನ್ನು ತಾಲ್ಲೂಕುಗಳಲ್ಲಿ ತೆರೆಯಲು ಸಾಧ್ಯವೆ ?

ಡಾ॥ ಆರ್. ನಾಗನಗೌಡ.—ಕೇಂದ್ರ ಬ್ಯಾಂಕುಗಳಿರುವುದು ಒಂದೊಂದು ಡಿಸ್ಟ್ರಿಕ್ಟಿಗೆ ಒಂದೊಂದೇ. ತಾಲ್ಲೂಕುಗಳಲ್ಲಿರುವ ಕ್ರೆಡಿಟ್ ಸೊಸೈಟಿಗಳ ಮೂಲಕ ಏರ್ಪಾಡು ಮಾಡುತ್ತೇವೆ. ತಾಲ್ಲೂಕುಗಳಲ್ಲಿ ಮಾಡಿದರೆ ಕೆಲಸ ಸರಿಯಾಗಿ ನಡೆಯುವುದಿಲ್ಲ ಮತ್ತು ಆವಶ್ಯಕತೆಯೂ ಇಲ್ಲ.

ಶ್ರೀ ಟಿ. ಜಿ. ತಿಮ್ಮೇಗೌಡ.—ಒಬ್ಬ ರೈತನಿಗೆ ಎಷ್ಟು ಹಣ ಸಾಲ ಕೊಡುತ್ತೀರಿ ?

ಡಾ॥ ಆರ್. ನಾಗನಗೌಡ.—ಸದ್ಯಕ್ಕೆ 500 ರೂಪಾಯಿ ಎಂದು ಗೊತ್ತುಮಾಡಿದ್ದೇವೆ, ಕ್ರಮೇಣ ಹೆಚ್ಚುಮಾಡಬಹುದು.

Sri H. C. LINGA REDDY.—Is it the policy of the Government to have one bank in each district ?

Dr. R. NAGAN GOWDA.—Yes.

Sri H. C. LINGA REDDY.—Are Government contemplating to start a bank in Kolar District ?

Dr. R. NAGAN GOWDA.—Yes, certainly. Within a very short time, we will have a bank in each of the districts.

Sri H. C. LINGA REDDY.—What steps have you taken to start a bank in Kolar District ?

Dr. R. NAGAN GOWDA.—Some steps are being taken. I cannot exactly say what those are and what progress we have made. But it is our aim to organise these societies before the end of the next month, if not earlier.

Sri H. C. LINGA REDDY.—What will be the total amount that will be made available for advancement of loans to the ryots in the whole of the State, Sir ?

Dr. R. NAGAN GOWDA.—The Reserve Bank has advanced Rs. 25 lakhs for this year, 1954-55. If we need some more for the next year, I am sure they will be prepared to do so, even to an extent of a crore of rupees.

ಶ್ರೀ ಟಿ. ಸಿ. ಬನಪ್ಪ.—ಕೆಲವು ಜಿಲ್ಲೆಗಳಲ್ಲಿ ಕೇಂದ್ರ ಬ್ಯಾಂಕುಗಳನ್ನು ಸ್ಥಾಪನೆಮಾಡುವುದು ನಿಧಾನವಾದರೆ ಏನು ಮಾಡುತ್ತೀರಿ ?

ಡಾ॥ ಆರ್. ನಾಗನ ಗೌಡ.—ಇಲ್ಲ, ನಿಧಾನವಾಗಬಾರದು ; ತಾವೆಲ್ಲ ಸಹಾಯಮಾಡಿ ಬೇಗ ಆಗುವಂತೆ ಮಾಡಬೇಕು.

ಶ್ರೀ ಟಿ. ಸಿ. ಬನಪ್ಪ.—ನಿಧಾನವಾದರೆ ಹಕ್ಕದ ಜಿಲ್ಲೆಯ ಬ್ಯಾಂಕಿನಿಂದ ಸಹಾಯಮಾಡುವುದಕ್ಕೆ ಸಾಧ್ಯವೆ ?

ಡಾ॥ ಆರ್. ನಾಗನಗೌಡ.—ಆಗುವುದಿಲ್ಲ, ಅದೇ ಜಿಲ್ಲೆಯಿಂದಲೇ ಮಾಡಬೇಕು.

ಶ್ರೀ ಬಿ. ಹುಚ್ಚೇಗೌಡ.—ತುಮಕೂರು ಜಿಲ್ಲೆಯಲ್ಲಿ ಬ್ಯಾಂಕಿನ ಕೆಲಸ ನಡೆಸಬೇಕಾದರೆ ಎಷ್ಟು ಹಣ ಬೇಕು ?

ಡಾ॥ ಆರ್. ನಾಗನಗೌಡ.—ಎರಡು ಲಕ್ಷ ರೂಪಾಯಿಗಳ ವರಿಗೆ ಬೇಕು. ತಾವೆಲ್ಲ ಸಹಾಯಮಾಡಿ ಸೇರಿಸಿದರೆ ಚೆನ್ನಾಗಿ ನಡೆಯುತ್ತದೆ.

ಶ್ರೀ ಬಿ. ಹುಚ್ಚೇಗೌಡ.—ಎರಡು ಲಕ್ಷ ಆದ ಕೂಡಲೇ ಮಾಡುತ್ತೀರಾ ?

ಡಾ॥ ಆರ್. ನಾಗನ ಗೌಡ.—ಅದಕ್ಕೆ ಮುಂಚೆ ಕೂಡ ಮಾಡುತ್ತೇವೆ.

ಶ್ರೀ ಬಿ. ಹುಚ್ಚೇಗೌಡ.—ಷೇರು ಹಣವನ್ನು ಸಾಲದ ದರಖಾಸ್ತಿನ ಜೊತೆಗೇ ಜನರು ಕೊಡುವುದರಿಂದ, ಈಗಲೇ ಪ್ರಾರಂಭ ಮಾಡಿಬಿಟ್ಟರೆ, ಷೇರಿನ ಹಣ ತಕ್ಷಣ ಒದಗುವುದಿಲ್ಲವೆ ?

ಡಾ॥ ಆರ್. ನಾಗನಗೌಡ.—ಪ್ರಾರಂಭ ಮಾಡುವುದಕ್ಕೆ ಮೊದಲು ಸ್ವಲ್ಪ ಹಣವನ್ನು ವಸೂಲು ಮಾಡಿರಬೇಕು. ಈಗ ಗ್ರಾಮಗಳಿಂದ ಷೇರು ಮೊಬಲಗನ್ನು ತೆಗೆದುಕೊಂಡಿದ್ದೇವೆ, ಆಮೇಲೆ ರೈತರಿಂದಲೂ ತೆಗೆದುಕೊಳ್ಳುತ್ತೇವೆ.

ಶ್ರೀ ಡಿ. ಆರ್. ಕರೀಗೌಡ.—ಸಾಲ ತೆಗೆದುಕೊಂಡರೆ ಅದನ್ನು ರೈತರು ಎಷ್ಟು ತಿಂಗಳಲ್ಲಿ ವಾಪಸು ಕೊಡಬೇಕು?

ಡಾ॥ ಆರ್. ನಾಗನಗೌಡ.—ಹನ್ನೊಂದು ತಿಂಗಳುಗಳೊಳಗೆ, ಅಥವಾ ಆ ವರ್ಷದೊಳಗೆ ಕೊಡಬೇಕು.

ಶ್ರೀ ಡಿ. ಆರ್. ಕರಿಗೌಡ.—ಮಾರ್ಚಿ ತಿಂಗಳ ಆಖೈರಿನಲ್ಲಿ ಕೊಟ್ಟರೆ ಆಗುತ್ತದಲ್ಲವೆ ?

ಡಾ॥ ಆರ್. ನಾಗನಗೌಡ.—ಹಾಗೆ ತಿಳಿದುಕೊಳ್ಳಬಾರದು ; ಬತ್ತ, ರಾಗಿ ಕಟಾವು ಆದ ತಕ್ಷಣ ಕೊಟ್ಟರೆ ಅನುಕೂಲವಾಗುತ್ತದೆ. ಮಾರ್ಚಿಯವರೆಗೆ ನಿಂತರೆ, ಕಷ್ಟವಾಗುತ್ತದೆ. ರೈತರು ಇರುವ ದವಸ ಧಾನ್ಯವನ್ನು ಮಾರಾಟಮಾಡಿ ಖರ್ಚುಮಾಡಿಕೊಂಡರೆ ಆಮೇಲೆ ಅವರು ಕೊಡುವುದಕ್ಕೆ ಕಷ್ಟವಾಗುತ್ತದೆ.

ಶ್ರೀ ಡಿ. ಆರ್. ಕರಿಗೌಡ.—ಒಂದು ವರ್ಷದಲ್ಲಿ ವಾಪಸು ಕೊಡಬೇಕೆಂದಿಲ್ಲವೆ ?

ಡಾ॥ ಆರ್. ನಾಗನಗೌಡ.—ಒಂದು ವರ್ಷ ಎಂದು ರೂಲ್ಸ್‌ನಲ್ಲಿದ್ದರೂ ಅಷ್ಟು ನಿಧಾನ ಮಾಡಬಾರದು.

ಶ್ರೀ ಡಿ. ಆರ್. ಕರಿಗೌಡ.—ತೆಂಗಿನ ತೋಟ ಇರುವವರು ಆಕ್ಕೋಬರಿನಲ್ಲಿ ಹಣ ತೆಗೆದುಕೊಂಡರೆ ಅದನ್ನು ಮಾರ್ಚಿಯಲ್ಲಿ ಕೊಡಬೇಕೆಂದು ಒತ್ತಾಯ ಮಾಡುತ್ತಾರಲ್ಲವೆ ?

ಡಾ॥ ಆರ್. ನಾಗನಗೌಡ.—ಸಾಧಾರಣವಾಗಿ ಹನ್ನೊಂದು ತಿಂಗಳಲ್ಲಿ ಕೊಟ್ಟರೆ ಆಗುತ್ತದೆ.

ಶ್ರೀ ಡಿ. ಆರ್. ಕರಿಗೌಡ.—ಕೆಲವು ಸಂದರ್ಭಗಳಲ್ಲಿ ಏಪ್ರಿಲ್ ಮೇ ತಿಂಗಳಿನಲ್ಲಿ ಕೊಟ್ಟು ಸೆಪ್ಟೆಂಬರ್ ಆಕ್ಕೋಬರಿನಲ್ಲಿ, ವಾಪಸು ಕೊಡಬೇಕೆಂದು ಕೇಳುತ್ತಾರೆ, ಇದರಿಂದ ರೈತರಿಗೆ ತೊಂದರೆಯಲ್ಲವೆ ?

ಅಧ್ಯಕ್ಷರು.—ಪೂರ್ತಿಯಾಗಿ ವಿವರಗಳನ್ನೆಲ್ಲಾ ಈ ಸಂದರ್ಭದಲ್ಲಿ ಚರ್ಚೆಮಾಡುವುದಕ್ಕಾಗುವುದಿಲ್ಲ.

ಡಾ॥ ಆರ್. ನಾಗನಗೌಡ.—ಹಾಗೆ ಮಾಡಿದರೆ ತೊಂದರೆಯಾಗಬಹುದು, ಸೆಂಟ್ರಲ್ ಬ್ಯಾಂಕುಗಳು, ಏಪೆಕ್ಸ್ ಬ್ಯಾಂಕ್‌ನಿಂದ ಪಡೆದುದನ್ನು ಸೊಸೈಟಿಗಳು

ಕೊಡಬೇಕಾಗುತ್ತದೆ. ಆದುದರಿಂದ ಬೇಗ ಕೊಟ್ಟರೆ ಅನುಕೂಲ.

Sri G. SIVAPPA.—What is the maximum amount they are going to advance and the rate of interest that will be charged ?

Dr. R. NAGAN GOWDA.—We are going to charge one anna per rupee per year.

Sri G. SIVAPPA.—What is the amount of loan that will be given for each ryot ?

Dr. R. NAGAN GOWDA.—For each ryot, it is about Rs. 500. But later on as banks and societies take to work, the amount will be increased even to the extent of a couple of thousands of rupees.

ಶ್ರೀ ಜಿ. ಶಿವಪ್ಪ.—ಮಿಡಿಯಂ ಟರ್ಮ್ ಲೋನ್‌ಗಳನ್ನು ಕೊಡುವುದಕ್ಕವಕಾಶ ಮಾಡುತ್ತೀರಾ ?

ಡಾ॥ ಆರ್. ನಾಗನ ಗೌಡ.—ಈಗ ಅವಕಾಶವಿಲ್ಲ. ಕೆಲವು ದಿವಸಗಳಾದಮೇಲೆ ಮಾಡಬೇಕೆಂದು ರಿಜರ್ವ್ ಬ್ಯಾಂಕಿನವರು ಯೋಚನೆ ಇಟ್ಟುಕೊಂಡಿದ್ದಾರೆ, ನೋಡೋಣ.

ಶ್ರೀ ಜಿ. ಶಿವಪ್ಪ.—ಸರ್ಕಾರದವರು ಪ್ರಯತ್ನ ಮಾಡುವುದಕ್ಕಿಂತ ಇದಕ್ಕೆ ಜನರು ಪ್ರಯತ್ನಮಾಡಬೇಡವೆ ?

ಡಾ॥ ಆರ್. ನಾಗನಗೌಡ.—ಪ್ರಶ್ನೆಯನ್ನು ಮತ್ತೊಮ್ಮೆ ಕೇಳಿ ಧಯವಿಟ್ಟು.

Sri G. SIVAPPA.—Is it not the people who have to take interest in the bank ?

Dr. R. NAGAN GOWDA.—Of course. It is the people's bank and it is the people who should take interest in it. We are nominating the Deputy Commissioners as the Presidents of these banks. But in a very short time, I expect, by the working of these banks, that it will be possible to throw the presidentship open for election to non-official members.

Sri G. SIVAPPA.—For what period have you created the present directors ?

Dr. R. NAGAN GOWDA.—I think it is for three years.

ಶ್ರೀ ಬಿ. ಎಕ್. ಬೋರಣ್ಣಗೌಡ.—ನವೆಂಬರ್ ತಿಂಗಳಲ್ಲಿ ಕೆಲವು ಸೊಸೈಟಿಗಳಿಗೆ ಕೊಟ್ಟಿಲ್ಲವೆ ?

ಡಾ॥ ಆರ್. ನಾಗನಗೌಡ.—ಹೌದು.

ಶ್ರೀ ಬೋರಣ್ಣಗೌಡ.—ಹಾಗಾದರೆ ನವಂಬರ್ ತಿಂಗಳೊಳಗೆ ಹಣ ವಾಪಸು ಕೊಡಬೇಕೆಂದು ತಗಾದೆ ಮಾಡುತ್ತೀರಿ. ಅದಕ್ಕೆ ಕಾರಣವೇನು ?

ಡಾ॥ ಆರ್. ನಾಗನಗೌಡ.—ಇಲ್ಲ. ಸಾಧಾರಣವಾಗಿ ಯಾವ ಪೈರಿನಮೇಲೆ ಹಣ ಸಾಲ ಕೊಟ್ಟಿದ್ದಾರೋ ಆ ಪೈರು ಕಟಾವಣೆ ಆದಮೇಲೆ ಕೊಡಬೇಕೆಂಬುದು ತತ್ವ. ಅವರಿಗೆ 11-12 ತಿಂಗಳ ವಾಯಿದೆ ಬಾಂಡ್ಸು ಇರುತ್ತದೆ. ಆದ್ದರಿಂದ ಅದನ್ನು adjust ಮಾಡುವುದಕ್ಕೆ ಸಾಧ್ಯವಾಗುತ್ತದೆ. ಅದು ಕಷ್ಟವಾದ ಕೆಲಸವಲ್ಲ.

ಶ್ರೀ ಬೋರಣ್ಣಗೌಡ.—ಈಗ ನವಂಬರ್ ತಿಂಗಳಲ್ಲಿ ಕೊಟ್ಟಿರುವ ಹಣವನ್ನು ಮುಂದಿನ ನವಂಬರ್ ತಿಂಗಳ ವರೆಗೆ ವಾಪಸ್ಸು ಕೊಡುವುದಕ್ಕೆ ಮುಂದು ವರಿಸುತ್ತೀರಾ ?

ಡಾ॥ ಆರ್. ನಾಗನಗೌಡ.—ಆ ಸಂದರ್ಭಗಳು ಏನು ಇವೆ ಎಂಬುದನ್ನು ವಿಚಾರಿಸಿ ನೋಡುತ್ತೇವೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಸಾಲ ತೆಗೆದು ಕೊಳ್ಳುವವರು ಸಾಲ ತೆಗೆದುಕೊಳ್ಳಬೇಕಾದರೆ registration fee ಮತ್ತು encumbrance certificate fee ಯನ್ನು ವಜಾ ಮಾಡಬೇಕೆಂದು ಸರ್ಕಾರದವರನ್ನು ಕೇಳಿಕೊಂಡಿದ್ದಾರೆಯೇ ?

ಡಾ॥ ಆರ್. ನಾಗನಗೌಡ.—ಕೇಳಿಕೊಂಡಿದ್ದಾರೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಸರ್ಕಾರದವರು ಏನು ತೀರ್ಮಾನ ಮಾಡಿದ್ದಾರೆ ?

ಡಾ॥ ಆರ್. ನಾಗನಗೌಡ.—ಸರ್ಕಾರದವರು ಕೆಲವು ರಿಯಾಯತಿಗಳನ್ನು ಕೊಟ್ಟಿದ್ದಾರೆ. ಅವರು ಇನ್ನೂ ಹೆಚ್ಚಾಗಿ ರಿಯಾಯತಿಗಳನ್ನು ಕೇಳುತ್ತಿದ್ದಾರೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—Free from encumbrance fee and free from registration fee ವಿಚಾರದಲ್ಲಿ ಸರ್ಕಾರದವರು ಏನಾದರೂ ರಿಯಾಯ್ತಿಯನ್ನು ಕೊಟ್ಟಿದ್ದಾರೆಯೇ ?

ಡಾ॥ ಆರ್. ನಾಗನಗೌಡ.—ಸಾಧ್ಯವಿಲ್ಲ. ಅದನ್ನು ಸರ್ಕಾರದವರು ಯೋಚನೆ ಮಾಡುತ್ತಿದ್ದಾರೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—Encumbrance Certificateನ್ನು ಸಾಲ ತೆಗೆದುಕೊಳ್ಳುವ ಸಣ್ಣ ಸಣ್ಣ ರೈತರು ಸಬ್ ರಿಜಿಸ್ಟ್ರಾರ್‌ರವರ ಆಫೀಸಿನಿಂದ ತರುವುದು ಬಹಳ ತೊಂದರೆ ಇದೆ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಡಾ॥ ಆರ್. ನಾಗನಗೌಡ.—ಅದು ಸರ್ಕಾರದವರ ಗಮನದಲ್ಲಿದೆ. ಅದಕ್ಕೆ ಏನು ಅನುಕೂಲಗಳನ್ನು ಮಾಡಿಕೊಡಬೇಕೋ ಅದೇರೀತಿಯಾಗಿ ಮಾಡುತ್ತಿದ್ದೇವೆ.

ಶ್ರೀ ಟಿ. ಎಕ್. ಮೂಡಲಗಿರಿಗೌಡ.—ಸಾಲ ತೆಗೆದು ಕೊಂಡ ಹಣವನ್ನು ರೈತನು ವಾಪಸ್ಸು ಕೊಡಬೇಕಾದರೆ ಹಣದ ರೂಪದಲ್ಲಿ ಕೊಡಬೇಕೋ ಅಥವಾ ದವಸ ರೂಪದಲ್ಲಿ ಕೊಡಬೇಕೋ ?

ಡಾ॥ ಆರ್. ನಾಗನಗೌಡ.—ಸಾಲ ಕೊಡತಕ್ಕ ಸೊಸೈಟಿಗೆ ಏನು ಅನುಕೂಲಗಳಿವೆಯೋ ಅಂದರೆ godown ಮತ್ತು ಅದರ ಪಕ್ಕದಲ್ಲಿ sales depotಗಳು ಇದ್ದರೆ ದವಸವನ್ನು ತೆಗೆದುಕೊಳ್ಳುತ್ತಾರೆ. ಆ ಏರ್ಪಾಡುಗಳನ್ನು ಸಂಬಂಧಪಟ್ಟ Co-operative Societyಗಳೇ ಮಾಡಬೇಕಾಗಿದೆ.

ಶ್ರೀ ಟಿ. ಎಕ್. ಮೂಡಲಗಿರಿಗೌಡ.—ರೈತನು ಸಾಲ ತೀರಿಸುವಾಗ ಅವನ ಸಾಲವನ್ನು ದವಸರೂಪದಲ್ಲಿ ತೀರಿಸುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಡಾ॥ ಆರ್. ನಾಗನಗೌಡ.—ಹಾಗೆ ಮಾಡಬೇಕೆಂತಲೇ ನಮ್ಮ ಉದ್ದೇಶ.